


**ವಿಶ್ವದಲ್ಲಿ ವಿಮಾನಗಳು ಹಾರಲು ಅಂಜುವ ಸ್ಥಳಗಳೂ ಇವೆ**

# ನೋ ಫ್ಲೈಟ್ಸ್ ಲ್ಯಾಂಡ್!

ಕೆಲವು ಭೂಪ್ರದೇಶಗಳ ಮೇಲೆ ಹಾರಾಡಲು ವಿಮಾನಗಳು ಅಳುಕುತ್ತವೆ. ಮತ್ತೆ ಕೆಲವು, ವಿಮಾನ ಹಾರಾಟಕ್ಕೆ ನಿರ್ಬಂಧಿತ ಜಾಗಗಳು. ಇನ್ನೂ ಕೆಲವು, ವಿಮಾನ ಚಾಲಕರೇ ವಿಮಾನ ಒಯ್ಯಲು ಬಯಸದ ಸ್ಥಳಗಳು. ಅಂದಹಾಗೆ, ಈ ಪ್ರದೇಶಗಳಿಂದ ವಿಮಾನಗಳೇಕೆ ದೂರ?

■ ಪ್ರೊ. ಎಂ. ಅಬ್ದುಲ್ ರೆಹಮಾನ್ ಪಾಷ

ದೇಶದಿಂದ ದೇಶಕ್ಕೆ ಹಾಗೂ ದೇಶದ ಒಳಭಾಗದಲ್ಲಿ ದೂರದ ಪ್ರಯಾಣಕ್ಕೆ ವಿಮಾನವನ್ನು ಅವಲಂಬಿಸುವವರ ಸಂಖ್ಯೆ ಈಗ ಹೆಚ್ಚಾಗಿದೆ. ಪ್ರಸ್ತುತ ವಿಶ್ವದಲ್ಲಿ 25,578 ವಾಣಿಜ್ಯ ವಿಮಾನಗಳು ಸೇವೆ ಸಲ್ಲಿಸುತ್ತಿವೆ. ಯಾವುದೇ ಒಂದು ಕ್ಷಣದಲ್ಲಿ ಜಗತ್ತಿನ ವಿಶಾಲ ಆಕಾಶದಲ್ಲಿ ಸುಮಾರು 9,700 ವಿಮಾನಗಳು ಹಾರಾಡುತ್ತಿರುತ್ತವೆ. ಮಿಲಿಟರಿಗೆ ಸೇರಿದ, ಕಾರ್ಗೊ ಮತ್ತು ಖಾಸಗಿ ವಿಮಾನಗಳನ್ನೂ ಲೆಕ್ಕಕ್ಕೆ ಹಿಡಿದರೆ ಯಾವುದೇ ಕ್ಷಣದಲ್ಲಿ ಬಾನಿನಲ್ಲಿ ಹಾರಾಟ ನಡೆಸುವ ಲೋಹದ ಹಕ್ಕಿಗಳ ಸಂಖ್ಯೆ ಸರಿಸುಮಾರು 17,500.

‘ಲೈವ್ ಫ್ಲೈಟ್ ಟ್ರ್ಯಾಕರ್’ ಎಂಬ ಒಂದು ವಿಶಿಷ್ಟ ಕಂಪ್ಯೂಟರ್ ಆ್ಯಪ್ ಇದೆ. ಅದನ್ನು ಬಳಸಿ ನೋಡಿದರೆ, ಪೂರ್ವ ಮತ್ತು ಪಶ್ಚಿಮ ಭೂಗೋಳಾರ್ಧಗಳ ಭೂಪಟದ ಮೇಲೆ ಇಡೀ ಜಗತ್ತಿನಲ್ಲಿ ಆಯಾ ಕ್ಷಣದಲ್ಲಿ ಹಾರಾಡುತ್ತಿರುವ